ಓ.ಎಸ್. ನಂ.312 /2012 ಪಿ.ಡಬ್ಲೂ-1 ಹೆಸರು - ಮಹದೇವಮ್ಮ

ಸಾಕ್ಷಿಯನ್ನು ದಿನಾಂಕಃ 05/ 05 /2019 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಕುಮಾರಿ/ಶ್ರೀಮತಿ/ಶ್ರೀ. ಎನ್. ಎಸ್ ವಕೀಲರಿಂದಃ-

ಸರ್ವೆ ನಂ.289/1 ರಲ್ಲಿ ಪ್ರತಿವಾದಿಯ ಮನೆ ಉತ್ತರ ದಿಕ್ಕಿನಲ್ಲಿ ಇದೆ ಎಂದರೆ ಸರಿಯಲ್ಲ. ಸರ್ವೆ ನಂ. 289/2 ವಿಸ್ತೀರ್ಣ 5 ಗುಂಟೆ ಬಿಟ್ಟು ಬೇರೆ 289/1 ಮತ್ತು 3 ಪೋಡ್ ಜಮೀನುಗಳು ನಮ್ಮ ದಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಸುತ್ತಮುತ್ತ ಲಿನ ಜಾಗದಲ್ಲಿ ಮನೆಗಳಿರುತ್ತವೆ ಎಂದರೆ ಸರಿ. ದಾವಾ ಆಸ್ತಿಯ ಎಡಭಾಗಕ್ಕೆ ಪ್ರತಿವಾದಿಯ ತಂದೆ ಮರೀಗೌಡರ ಮನೆ ಇದ್ದು ಅದರ ಪಕ್ಕಕ್ಕೆ ರಸ್ತೆ ಇರುತ್ತದೆ. ಮರೀಗೌಡರ ಮನೆಯ ಎಡಕ್ಕೆ ಪ್ರತಿವಾದಿಯ ಮನೆ ಇದ್ದು ಅದರ ಪಕ್ಕಕ್ಕೆ ರಸ್ತೆ ಇದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಎಡ ಭಾಗಕ್ಕೆ ಸರ್ವೆ ನಂ.289/1 ಆಸ್ತಿ ಇದ್ದು ಅದರಲ್ಲಿ ಪ್ರತಿವಾದಿಯು ಮನೆ ಮುಂದೆ ಕಾಲಿ ಜಾಗ ಇದೆ ಎಂದರೆ ಸರಿಯಲ್ಲ. ನಿಪಿ-5 ರ ಫೋಟೋದಲ್ಲಿರುವ ದೊಡ್ಡ ಮರ 289/1 ಆಸ್ತಿಯಲ್ಲಿ ಇರುತ್ತದೆ ಎಂದರೆ ಸರಿಯಲ್ಲ.

ದಾವಾ ಹಾಕುವ ಪೂರ್ವ ದಲ್ಲಿ ದಾವಾ ಆಸ್ತಿಯನ್ನು ಸರ್ವೆ ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಹಾಕುವ ಪೂರ್ವ ದಲ್ಲಿಯೇ ದಾವಾ ಆಸ್ತಿ ಸರ್ವೆ ಆಗಿದೆ ಎಂದರೆ ಸರಿಯಲ್ಲ. ಆ ಸರ್ವೆ ರಿಪೋರ್ಟ ಪ್ರಕರ ದಾವಾ ಆಸ್ತಿಯನ್ನು ಮತ್ತು ಅದರ ಪಕ್ಕದಲ್ಲಿರುವ ಬೇರೆ ಆಸ್ತಿಯನ್ನು ಗುರುತಿಸಿ ವಿಂಗಡಿಸಿರುತ್ತಾರೆ ಎಂದರೆ ಸರಿಯಲ್ಲ. ಸರ್ವೆ ನಂ.289/1 ರ ದಕ್ಷಿಣ ಭಾಗಕ್ಕೆ ದಾವಾ ಆಸ್ತಿಗಳು ಇವೆ ಎಂದರೆ ಸರಿಯಲ್ಲ. ದಾವಾ ಷೆಡ್ಯುಲ್ ಆಸ್ತಿಯನ್ನು ಸರಿಯಾಗಿ ಗುರುತಿಸದೆ ಪ್ರತಿವಾದಿಯ ಆಸ್ತಿ ಸರ್ವೆ ನಂ. 289/1 ಆಸ್ತಿಯನ್ನು ನನ್ನದು ಎಂದು ದಾವೆ ಹಾಕಿರುವೆ ಎಂದರೆ ಸರಿಯಲ್ಲ. ನ್ಯಾಯಾಲಯದಿಂದ ದಾವಾ ಆಸ್ತಿಯನ್ನು ಗುರುತಿಸಲು ನನಗೆ ಯಾವುದೇ ತೊಂದರೆ ಇಲ್ಲ. ದಾವಾ ಆಸ್ತಿಯು ಮತ್ತು ಸರ್ವೆ ನಂ.289/1 ಪೋಡ್ ಬೇರೆ ಬೇರೆ ಆಸ್ತಿಯಾಗಿರುತ್ತದೆ ಎಂದರೆ ಸರಿಯಲ್ಲ. ಸರ್ವೆ ನಂ.289 ರ ಆಸ್ತಿಯಲ್ಲಿ ಯಾರಾದರೂ ವ್ಯವಸಾಯ ಮಾಡುತ್ತಿದ್ದಾರಾ ಎಂಬ ಪ್ರಶ್ನೆಗೆ ಸಾಕ್ಷಿಯು ಎಲ್ಲರೂ ಮನೆಗಳನ್ನು ಕಟ್ಟಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯು ಪ್ರತಿವಾದಿಗಳ ಆಸ್ತಿಯಲ್ಲಿ ಸರ್ವೆ ಮಾಡಿದ ನಂತರ ಬರುವುದಿಲ್ಲ ಎಂದು ಗೊತ್ತಿದ್ದರೂ ಸುಳ್ಳು ದಾವೆ ಹಾಕಿದ್ದಾರೆ ಎಂದರೆ ಸರಿಯಲ್ಲ.

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ ಎಂ ಒ

1 ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ,
ನಂಜನಗೂಡು

ಓ.ಎಸ್. ನಂ.312 /2012 ಪಿ.ಡಬ್ಲೂ-3 ಹೆಸರು - ನಿಂಗನಾಯಕ

ಸಾಕ್ಷಿಯನ್ನು ದಿನಾಂಕಃ 05/04/2019 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಕುಮಾರಿ/ಶ್ರೀಮತಿ/ಶ್ರೀ. ಎನ್. ಎಸ್ ವಕೀಲರಿಂದಃ-

ದಾವಾ ಆಸ್ತಿಯನ್ನು ನನ್ನ ಬಾವ ಕ್ರಯಕ್ಕೆ ಪಡೆದಾಗ ನೋಡಿರುತ್ತೇನೆ . ಕ್ರಯಕ್ಕೆ ಪಡೆಯುವ ಸಮಯದಲ್ಲಿ ದಾವಾ ಆಸ್ತಿಯ ಸ್ಕೆಚ್ ಅನ್ನು ಮಾಡಿಸಿರುವುದಿಲ್ಲ . ಆ ಸಮಯಕ್ಕೆ ಆರ್.ಟಿ.ಸಿಯಲ್ಲಿರುವ ಹೆಸರುಗಳನ್ನು ನೋಡಿ ಮಾಲಿಕತ್ವ ವನ್ನು ತಿಳಿದುಕೊಂಡು ಕ್ರಯಕ್ಕೆ ಪಡೆದಿರುತ್ತೇವೆ. ನಿಪಿ-3 ದಾಖಲೆಯ ಕ್ರಯಪತ್ರದಲ್ಲಿ ನಾನು ಸಾಕ್ಷಿಯಾಗಿ ಸಹಿ ಮಾಡಿರುವುದಿಲ್ಲ. ಕ್ರಯಪತ್ರದಲ್ಲಿರುವ ಸಂಗತಿಯನ್ನು ನಾನು ಓದಿದ್ದು ಈಗ ನನಗೆ ನಿನಪಿಲ್ಲ. ಮರೀಗೌಡರ ಭಾಗಕ್ಕೆ ಬಂದ ಜಮೀನನ್ನು ನನ್ನ ಭಾವ ಕ್ರಯಕ್ಕೆ ಪಡೆದಿರುತ್ತಾರೆ . ಮರೀಗೌಡರು ಅದೇ ರೀತಿ ಅವರಿಗೆ ಬಂದಂತಹ ಭಾಗದ ಆಸ್ತಿಯನ್ನು ಇತರರಿಗೆ ಕೂಡ ಕ್ರಯಕ್ಕೆ ಕೊಟ್ಟಿರುತ್ತಾರೆ ಎಂದರೆ ಸರಿ . ಸರ್ವೆ ನಂ.289/2 ವಿಸ್ತೀರ್ಣ 1 ಎಕರೆ 2 ಗುಂಟೆ ಜಮೀನು ಇದೆ ಎಂದು ತೋರಿಸಲು ನಾನು ಆರ್.ಟಿ.ಸಿಯನ್ನು ಕೋಟ್ಟಿರುತ್ತೇನೆ. ಕ್ರಯಕ್ಕೆ ಪಡೆದ ನಂತರ ದಾವಾ ಸ್ವತ್ತುನ್ನು ನಾವು ಅಳತೆ ಮಾಡಿಸಿರುವುದಿಲ್ಲ. ನನ್ನ ಭಾವ ತೀರಿಕೊಂಡ ನಂತರ ನಾನು ಮತ್ತು ನನ್ನ ತಂಗಿ ಇಡೀ ಸರ್ವೆ ನಂ.289 ಅಳತೆ ಮಾಡಿಸಿರುತ್ತೇವೆ.

ಅಳತೆ ಮಾಡಿರುವ ಹಾಗೆ 289/1 ದಕ್ಷಿಣಕ್ಕೆ ದಾವಾ ಆಸ್ತಿಯಿದ್ದು ಅದರ ದಕ್ಷಿಣಕ್ಕೆ ಸರ್ವೆ ನಂ.289/3 ಇರುತ್ತದೆ ಎಂದರೆ ಸರಿಯಲ್ಲ. ಖಾಸಗಿ ಸರ್ವೆಯರ್ ಹೇಳಿದ ಪ್ರಕಾರ ದಾವಾ ಆಸ್ತಿಯು ಜಸರ್ವೆ ನಂ.289/1 ಆಸ್ತಿಯಲ್ಲಿ ಬರುವುದಿಲ್ಲ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯ ಮನೆ ದಾವಾ ಆಸ್ತಿಯ ಪಶ್ಚಿಮಕ್ಕೆ ಬರುತ್ತದೆ ಎಂದು ನುಡಿಯುತ್ತಾರೆ . ಪ್ರತಿವಾದಿಯ ಕಟ್ಟಿರುವ ಮನೆಯ ಉತ್ತರಕ್ಕೆ ಸ್ಮಶಾನ ಕ್ಕೆ ಹೋಗುವ ದಾರಿ ಇರುತ್ತದೆ ಎಂದರೆ ಸರಿ . ಪ್ರತಿವಾದಿಯ ಕಟ್ಟಿರುವ ಮನೆ ಯ ಎದುರುಗಡೆಗೆ ದೊಡ್ಡ ಮರ ಇರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಯ ಕಟ್ಟಿರುವ ಮನೆ ಸರ್ವೆ 289/1 ರಲ್ಲಿ ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯ ಮನೆ ಸರ್ವೆ ನಂ.289/2 ರಲ್ಲಿ ಅಳತೆ ಮಾಡುವ ಸಮಯಕ್ಕೆ ತಿಳಿದು ಬಂದು ಅದು ನನ್ನ ಗಮನದಲ್ಲಿರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಎಲ್ಲಿದೆ ಎಂದು ಗುರುತಿಸಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.289/1 ಪ್ರತಿವಾದಿ ಮನೆ ಕಟ್ಟಿರುವ ಆಸ್ತಿಯನ್ನು ನಮ್ಮ ಜಾಗ ಎಂದು ತಪ್ಪಾಗಿ ತಿಳಿದುಕೊಂಡಿದ್ದೇನೆ ಎಂದರೆ ಸರಿಯಲ್ಲ.

ನನ್ನ ಪ್ರಮಾಣ ಪತ್ರದಲ್ಲಿ ಹೇಳಿರುವಂತೆ ಮರ ಕಡೆಯುವ ಬಗ್ಗೆ ಪೋಲಿಸ್ ಠಾಣೆಯಲ್ಲಿ ಮತ್ತು ಪಂಚಾಯಿತಿದಾರರ ಸಮಕ್ಷಮ ದೂರು ನೀಡಿದ್ದು ಅವರು ಸಹ ನೀವು ಸರ್ವೆ ನಂ.289/1 ರ ಜಮೀನನ್ನು ಬಿಟ್ಟು ನಿಮ್ಮ ಜಮೀನನ್ನು ಗುರುತಿಸಿಕೊಂಡು ಹೋಗಬೇಕೆಂದು ಸಲಹೆ ನೀಡಿರುತ್ತಾರೀ ಎಂದರೆ ಸರಿಯಲ್ಲ. ದೂರನ್ನು 7 ವರ್ಷ ದ ಹಿಂದೆ ಕೊಟ್ಟಿದ್ದು ಆ ಸಮಯಕ್ಕೆ ಪಂಚಾಯಿತಿ ನಡೆದಿರುತ್ತದೆ. ಆ ರೀತಿ ಯಾವುದೇ ಪಂಚಾಯಿತಿ ನಡೆದಿರುವುದಿಲ್ಲ ನಾನು ಆ ರೀತಿ ಸುಳ್ಳು

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂಗಿಗೆ ಸಹಾಯ ಮಾಡುವುದಕ್ಕಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ ಎಂ ಒ

1 ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ,
ನಂಜನಗೂಡು